ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	590
ಮಾನ್ಯ ಸದಸ್ಯರ ಹೆಸರು	ಶ್ರೀ ಕೆ.ಸಿ.ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	09.03.2020
ಉತ್ತರಿಸುವ ಸಚಿವರು	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ	ಸರ್ಕಾರದ ಯಶಸ್ವಿನಿ ಯೋಜನೆ ಈಗಲೂ ಕಾರ್ಯರೂಪದಲ್ಲಿದೆಯೇ;	ಇಲ್ಲ. ಸರ್ಕಾರದ ಆದೇಶ ಸಂಖ್ಯೆ: ಆಕುಕ 69 ಸಿಜಿಇ 2018, ದಿ:15.11.2018ರನ್ವಯ "ಯಶಸ್ವಿನಿ" ಯೋಜನೆಯನ್ನು ಒಳಗೊಂಡಂತೆ ರಾಜ್ಯದಲ್ಲಿ ಅನುಷ್ಠಾನದಲ್ಲಿದ್ದ ವಿವಿಧ ಆರೋಗ್ಯ ಯೋಜನೆಗಳನ್ನು ಒಗ್ಗೂಡಿಸಿ ರಾಜ್ಯದ ಎಲ್ಲಾ ನಿವಾಸಿಗಳಿಗೆ ಆರೋಗ್ಯ ರಕ್ಷಣೆ ಒದಗಿಸುವ ಉದ್ದೇಶದಿಂದ "ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ" ಯೋಜನೆಯನ್ನು ದಿನಾಂಕ: 30/10/2018 ರಿಂದ ಜಾರಿಗೊಳಿಸಲಾಗಿದೆ.
ಆ	ಇದ್ದಲ್ಲಿ, ಈ ಯೋಜನೆಯ ಫಲಾನುಭವಿಗಳು ಯಾರ್‍ಯಾರು; ರೈತರಲ್ಲದೆ ಬೇರೆಯವರು ಈ ಯೋಜನೆ ಫಲಾನುಭವವನ್ನು ಪಡೆಯಬಹುದೆ; ಹಾಗಿದ್ದಲ್ಲಿ ಯಾರು;	ಅನ್ವಯಿಸುವುದಿಲ್ಲ.
ಇ	ಈ ಹಿಂದೆ ಇದರ ಅನುಕೂಲವನ್ನು ರೈತರಲ್ಲದವರು ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;	ಬಂದಿದೆ. ಈ ಹಿಂದೆ "ಯಶಸ್ವಿನಿ" ಯೋಜನೆಯಡಿಯಲ್ಲಿ ನಗರ, ಪಟ್ಟಣ ಪ್ರದೇಶ ಮತ್ತು ಪುರಸಭೆ ವ್ಯಾಪ್ತಿಯಲ್ಲಿ ಕಾರ್ಯನಿರತವಾಗಿರುವ ಸಹಕಾರ ಸಂಘಗಳಲ್ಲಿರುವ ಸದಸ್ಯರು ಮತ್ತು ಅವರ ಕುಟುಂಬ ವರ್ಗದವರು ಸಹ ಈ ಯೋಜನೆಯಡಿ ಚಿಕಿತ್ಸೆ ಪಡೆಯಲು ಅವಕಾಶವಿತ್ತು.
ಈ	ಇದನ್ನು ಈ ಸಾಲಿನಲ್ಲಿಯೂ ಮುಂದುವರೆಸಲಾಗಿದೆಯೇ?	ಇಲ್ಲ.

ಆಕುಕ 15 ಎಸ್‌ಬಿವಿ 2020

(ಬಿ. ಶ್ರೀರಾಮುಲು)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ